# ನಿಮ್ಮ ಹತ್ತಿರ ಇಂಟರ್ ನೆಟ್ ಸಂಪರ್ಕವಿರುವ ಸ್ಮಾರ್ಟ್ ಫೋನ್ ಇದೆಯೇ?

## ಯುನಿಫೈಡ್ ಪೇಮೆಂಟ್ ಇಂಟರ್ ಫೇಸ್ (UPI) ವೇದಿಕೆಯನ್ನು ಬಳಸಿ ಡಿಜಿಟಲ್ ಆಗಿ

**ಇಂಟರ್ ನೆಟ್ ಸಂಪರ್ಕ ಇರುವ ಫೋನ್ ಉಪಯೋಗಿಸಿ ಎರಡು ಬ್ಯಾಂಕು-ಖಾತೆಗಳ ನಡುವೆ ಹಣವನ್ನು ವರ್ಗಾವಣೆ ಮಾಡಲು ಅವಕಾಶ ಕಲ್ಪಿಸುವ ಒಂದು ವೇದಿಕೆ**



ನೀವು ಇದನ್ನು ಉಪಯೋಗಿಸಬೇಕಾದರೆ

*ನಿಮ್ಮ ಮೊಬೈಲ್ ಸಂಖ್ಯೆಯು ನಿಮ್ಮ ಬ್ಯಾಂಕಿನ ಖಾತೆಗೆ ಸಂಪರ್ಕ ಹೊಂದಿರಬೇಕು, ಮತ್ತು

*ನಿಮ್ಮ ಹತ್ತಿರ ಎಟಿಎಮ್/ಡೆಬಿಟ್ ಕಾರ್ಡ್ ಇರಬೇಕು

ನೀವು ಭೀಮ್ ಅಪ್ಲಿಕೇಶನ್, ಯಾವುದೇ ಬ್ಯಾಂಕಿನ ಅಪ್ಲಿಕೇಶನ್ ಅಥವಾ ಯುಪಿಐ ವ್ಯವಹಾರಗಳನ್ನು ಅನುವು ಮಾಡಿಕೊಡುವ ಬೇರೆ ಯಾವುದಾದರೂ ಅಪ್ಲಿಕೇಶನ್ ಅನ್ನು ಉಪಯೋಗಿಸಬಹುದು. ಉದಾಹರಣೆಗೆ, ಭೀಮ್ ಅಪ್ಲಿಕೇಶನ್ ಗೆ ಒಂದೇ ಬಾರಿ ಮಾಡಬೇಕಾದ ನೋಂದಣಿ ಪ್ರಕ್ರಿಯೆಯು ಕೆಳಗಿನಂತಿದೆ

## ಒಂದೇ ಬಾರಿ ನೋಂದಣಿಯ ಪ್ರಕ್ರಿಯೆ

೧ ಭೀಮ್ ಅಪ್ಲಿಕೇಶನ್ ಅನ್ನು ಡೌನ್ ಲೋಡ್ ಮಾಡಿ

೨ ಅಪ್ಲಿಕೇಶನ್ ಅನ್ನು ಓಪನ್ ಮಾಡಿ, ನಿಮ್ಮ ಫೋನನ್ನು ನೋಂದಣಿ ಮಾಡಲು ಒಂದು ಎಸ್ಸೆಮ್ಮೆಸ್ ತಕ್ಷಣ ರವಾನೆಯಾಗುತ್ತದೆ.

೩ ಲಾಗ್ ಇನ್ ಗೆ ಪಾಸ್ ಕೋಡ್ ಇಟ್ಟುಕೊಳ್ಳಿ.ಲಾಗ್ ಇನ್ ಮಾಡಿದ ಮೇಲೆ, ಬ್ಯಾಂಕ್ ಖಾತೆಯನ್ನು ಆಯ್ಕೆ ಮಾಡಿ.

೪ ನಿಮ್ಮ "ಮೊಬೈಲ್ ಸಂಖ್ಯೆ@upi " ಇದು ನಿಮ್ಮ ಯುಪಿಐ ಐಡಿ ಅಥವಾ ವರ್ಚುವಲ್ ಪೇಮೆಂಟ್ ಅಡ್ರೆಸ್ (VPA) ಆಗುತ್ತದೆ

೫ ನಿಮ್ಮ ಎಟಿಎಮ್ ಕಾರ್ಡಿನ ಸಂಖ್ಯೆಯ ಕೊನೆಯ 6 ಅಂಕಿಗಳನ್ನು ಮತ್ತು ನಿಮ್ಮ ATM ಕಾರ್ಡಿನ ಅವಧಿಯು ಮುಗಿಯುವ ತಿಂಗಳು ಮತ್ತು ವರ್ಷವನ್ನು ಟೈಪ್ ಮಾಡಿ. ನಂತರ ನಿಮ್ಮ ಮೊಬೈಲ್ ನಲ್ಲಿ ಬರುವ OTP ಯನ್ನು ಟೈಪ್ ಮಾಡಿ ನಿಮ್ಮದೇ ಆದ ಯುಪಿಐ ಪಿನ್ ಅನ್ನು ಪಡೆದುಕೊಳ್ಳಿ.

+ ನಿಮ್ಮ UPI ಪಿನ್ ಉಪಯೋಗಿಸಿ, ನೀವು ಯಾರಿಗೆ ಹಣ ಕಳುಹಿಸಬೇಕೋ ಅವರ ವರ್ಚುವಲ್ ವಿಳಾಸವನ್ನಷ್ಟೆ ಕೊಟ್ಟು, ನಿರಾಯಾಸವಾಗಿ ಅವರಿಗೆ ಹಣವನ್ನು ರವಾನಿಸಬಹುದು.

+ ಹಣ ಸ್ವೀಕರಿಸುವವರ ವರ್ಚುವಲ್ ವಿಳಾಸವಿಲ್ಲದಿದ್ದಲ್ಲಿ, ನೀವು ಹಣವನ್ನು IFSC ಮತ್ತು ಬ್ಯಾಂಕ್ ಖಾತೆಯ ಸಂಖ್ಯೆಯನ್ನು ನಮೂದಿಸುವ ಮೂಲಕವೂ ಕಳುಹಿಸಬಹುದು .

**24*7 ತಕ್ಷಣ ಹಣ ರವಾನೆ**



Design: Anupam Sharma01/17

UPI

**ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ**

**ಭಾರತೀಯ ರಿಜರ್ವ್ ಬ್ಯಾಂಕ್**

www.rbi.org.in